ಲಿಖಿತ ಮೂಲಕ ಉತ್ತರಿಸುವ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತನೆಯ ಅಧಿವೇಶನ

ಮಂಗಳವಾರ, ದಿನಾಂಕ : 03 ನೇ ಮಾರ್ಚ್, 2020

ರಾಜ್ಯದ ಕೈಗಾರಿಕೆಗಳ ವಸಾಹತುಗಳು ಮತ್ತು ಅಭಿವೃದ್ಧಿ ಕುರಿತು

ಶ್ರೀ ಹೆಚ್.ಎಂ. ರಮೇಶ್ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು) :-

137 (170) ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದ ಕೈಗಾರಿಕಾ ವಸಾಹತುಗಳ ಸದ್ಯದ ಸ್ಥಿತಿಗತಿಗಳೇನು ; ಕೈಗಾರಿಕಾ ಪ್ರದೇಶದ ಸಮಗ್ರ ಅಭಿವೃದ್ಧಿಗೆ ಸರ್ಕಾರದ ಬಳಿ ಯಾವ ಯೋಜನೆಯಿದೆ ; ಹೊಸ ಕೈಗಾರಿಕಾ ಪ್ರದೇಶ ಸ್ಥಾಪನೆಯ ಯೋಜನೆ ಇದೆಯೇ ; (ಮಾಹಿತಿ ನೀಡುವುದು)

(ಆ) ಪೀಣ್ಯ ಕೈಗಾರಿಕಾ ಪ್ರದೇಶ ವಸಂತ ನರಸಾಪುರ ಕೈಗಾರಿಕಾ ಪ್ರದೇಶ ಹಾಗೂ ಶಿವಮೊಗ್ಗ ಸೇರಿದಂತೆ ರಾಜ್ಯದ ಹಲವು ಕೈಗಾರಿಕಾ ಪ್ರದೇಶಗಳು ಜಿ.ಎಸ್.ಟಿ ಅನುಷ್ಠಾನದ ನಂತರ ಸಾಕಷ್ಟು ಸಂಕಷ್ಟ ಅನುಭವಿಸಿದ್ದು ಸರ್ಕಾರದ ಗಮನದಲ್ಲಿದೆಯೇ ; ಈ ಕೈಗಾರಿಕಾ ಪ್ರದೇಶಗಳ ಸದ್ಯದ ಸ್ಥಿತಿಯೇನು ; ಇವುಗಳ ಪುನರ್ ಅಭಿವೃದ್ಧಿಯ ಮಾನದಂಡಗಳೇನು ;

(ಇ) ಉತ್ತರ ಕರ್ನಾಟಕ ಅಥವಾ ಕಲ್ಯಾಣ ಕರ್ನಾಟಕ ಪ್ರದೇಶಗಳಲ್ಲಿ ನವ ಕೈಗಾರಿಕಾ ವಸಾಹತುಗಳ ಸ್ಥಾಪನೆಯ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ; ಹಾಗಿದ್ದಲ್ಲಿ, ಪ್ರಸ್ತಾವನೆಯ ಕುರಿತು ಸರ್ಕಾರ ಕೈಗೊಂಡ ಕ್ರಮಗಳೇನು ?